# ಸನ್ನತಿಯ ಚಂದ್ರಲಾಂಬಾ ದೇಗುಲ

ಶ್ರೀ ಕ್ಷೇತ್ರ ಸನ್ನತಿಯು ಕರ್ನಾಟಕದ ಉತ್ತರ ಭಾಗದ ಕಲಬುರಗಿ ಜಿಲ್ಲೆಯ ಹತ್ತಿರವಿರುವ ಒಂದು ಪುರಾಣ ಪ್ರಸಿದ್ಧ ಕ್ಷೇತ್ರ. ಶಕ್ತಿ ದೇವತೆಯಾದ ಶ್ರೀ ಚಂದ್ರಲಾಂಬಾ ದೇವಿಯ ಪುರಾತನ ಭವ್ಯ ದೇಗುಲವು ರಮಣೀಯವಾಗಿ ಹರಿಯುವ ಭೀಮಾ ನದಿ ತಟದಲ್ಲಿದೆ. ಈ ಪುಣ್ಯ ಕ್ಷೇತ್ರದ ದೇವತೆಯು ಮೂಲತಃ ಈಗಿನ ಬಲೂಚಿಸ್ತಾನದಿಂದ ಅಥವಾ ಕಾಶ್ಮೀರದ ಹಿಂಗುಲಾಂಬೆ ದೇವತೆಯೇ ಬಂದು ನೆಲೆಸಿದ್ದಾಳೆ ಎಂಬ ಪ್ರತೀತಿಯಿದೆ. ರಾಷ್ಟ್ರಕೂಟರ ಕುಲದೇವತೆಯಂತೆ.

ಈ ದೇವಾಲಯದ ಗರ್ಭಗುಡಿಯು ಶ್ರೀಚಕ್ರದ ತಳ ವಿನ್ಯಾಸದಲ್ಲಿದೆ. ಪ್ರತಿ ವರ್ಷ ಚೈತ್ರ ಮಾಸದ ಪಂಚಮಿಯಂದು ಈ ದೇವಿಯ ಅದ್ದೂರಿ ರಥೋತ್ಸವ ಹಾಗೂ 5 ದಿನಗಳ ಕಾಲ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನೆರವೇರುತ್ತದೆ.

**- ಮನೋಹರ ಜೋಶಿ, ಬೆಂಗಳೂರು**





# ಏನು ಹೇಳುತ್ತದೆ ಈ ಶಾಸನ?

ಗುಟ್ಟು ಬಿಟ್ಟುಕೊಡದ ಈ ಶಿಲಾಶಾಸನಗಳು ಬಸವಾಪಟ್ಟಣದ ಚಿದಂಬರ ದೀಕ್ಷಿತರ ಮನೆಯ ಪಕ್ಕದಲ್ಲಿವೆ. ತೋಟದಲ್ಲಿ ಮನೆ ಕಟ್ಟಿರುವ ಅವರು ಚಿಕ್ಕಂದಿನಿಂದಲೂ ಅವುಗಳನ್ನು ನೋಡುತ್ತಿದ್ದು ಅದರಲ್ಲಿರುವ ಅಕ್ಷರಗಳು ಆಗಲೇ ಕಾಣಿಸುತ್ತಿರಲಿಲ್ಲವಂತೆ. ಇನ್ನೊಂದರಲ್ಲಿ ಗಡ್ಡಧಾರಿ ವ್ಯಕ್ತಿಯ ಕೈಯಲ್ಲಿ ಕತ್ತಿಯಂತಹ ಆಯುಧವಿದ್ದು ತಲೆಯ ಎಡಭಾಗದಲ್ಲಿ ಸೂರ್ಯನೋ, ಚಂದ್ರನೋ ಅಥವಾ ಮುಡಿ ಕಟ್ಟಿದಂತೆಯೋ ಕಾಣಿಸುತ್ತಿದೆ. ಅಲ್ಲಿಯೇ ಪಲ್ಲಕ್ಕಿಯೂ ಇದೆ. ಬಲಭಾಗದಲ್ಲಿ ಕೆಳಗೆ ಒಂದು ಕುದುರೆಯ ಮೇಲೆ ದಂಡದಂತಹ ಆಕೃತಿ ಇದೆ. ಎಷ್ಟೋ ಜನರು ಬಂದು ಇದರ ಅಧ್ಯಯನ ಮಾಡಿದರೂ ಏನೆಂದು ಗೊತ್ತಾಗಿಲ್ಲ. ಈ ಶಾಸನಗಳ ಪಕ್ಕದಲ್ಲಿ ಶ್ರೀರಾಮನು ಸ್ಥಾಪಿಸಿದ್ದ ಎನ್ನಲಾದ ರಾಮೇಶ್ವರ ಗುಡಿ ಇದೆ. ಅವರ ಮನೆ ಎದುರಿಗೆ ಇರುವ ಬೆಟ್ಟಕ್ಕೆ ಚಿನ್ಮೂಲಾದ್ರಿ ಬೆಟ್ಟ ಎನ್ನುತ್ತಾರೆ.

**ಸೀತಾ ಎಸ್.ನಾರಾಯಣ, ಹರಿಹರ**

# ಚನ್ನಗಿರಿ ಕೋಟೆ

ಪ್ರಸ್ತುತ ಚನ್ನಗಿರಿಗೆ ಒಂದು ಕಾಲದಲ್ಲಿ ಅಸಂಡನಾಡು ಎಂಬ ಹೆಸರಿದ್ದು, ಗಂಗರ ಅಧೀನದಲ್ಲಿತ್ತು. ಆಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನೊಳಂಬವಾಡಿಯ ಭಾಗವಾಗಿತ್ತು. ನಂತರ ಇದು ಉಚ್ಚಂಗಿಯ ಪಾಂಡ್ಯರು ಹಾಗೂ 17ನೇ ಶತಮಾನದಲ್ಲಿ ಕೆಳದಿಯ ನಾಯಕರ ಅಧೀನಕ್ಕೆ ಒಳಪಟ್ಟಿತು. ಈ ಪ್ರದೇಶಕ್ಕೆ ಚೆನ್ನಮಾಜಿಯು ಕೋಟೆಯನ್ನು ಕಟ್ಟಿಸಿದ ನಂತರ ಚನ್ನಗಿರಿ ಎಂಬ ಹೆಸರು ಬಂತು.

ಪ್ರಸ್ತುತ ಚನ್ನಗಿರಿಯ ಪಶ್ಚಿಮಕ್ಕೆ ಇರುವ ಈ ಕೋಟೆಯು ಎರಡು ಸುತ್ತು ಗೋಡೆಗಳನ್ನು ಹೊಂದಿದ್ದು, ಇದನ್ನು ಮಣ್ಣು ಮತ್ತು ಗಾರೆಯನ್ನು ಬಳಸಿ ಕಲ್ಲಿನಿಂದ ಕಟ್ಟಲಾಗಿದೆ. ಇದಕ್ಕೆ ಕೊತ್ತಳವಿದ್ದು ಮುಖ್ಯ ದ್ವಾರವು ಉತ್ತರಕ್ಕಿದೆ. ಸಾಮಾನ್ಯವಾಗಿ ಅಂಡಾಕಾರವಾಗಿರುವ ಈ ಕೋಟೆಗೆ ಏಳು ಬುರುಜುಗಳು ಮತ್ತು ಎರಡು ಕಾವಲು ಗೋಪುರಗಳಿವೆ. ಮೇಲ್ಭಾಗದಲ್ಲಿ ಒಂದು ದೊಡ್ಡ ತಗ್ಗು ಕಾಣುತ್ತದೆ. ಅದರಲ್ಲಿ ಮಳೆ ನೀರನ್ನು ಸಂಗ್ರಹಿಸುತ್ತಿದ್ದರು ಎನ್ನಲಾಗಿದೆ, ಈಶಾನ್ಯ ಭಾಗದಲ್ಲಿ ಬಂಡೆಯನ್ನು ಕೊರೆದು ಮಾಡಿದ ಕೊಳವಿದ್ದು ಅದಕ್ಕೆ ಮೆಟ್ಟಲುಗಳನ್ನು ಮಾಡಲಾಗಿದೆ. ಅಲ್ಲದೆ 18ನೇ ಶತಮಾನಕ್ಕೆ ಸೇರಿದೆ ಎನ್ನಲಾದ ಕೋಟೆ ರಂಗನಾಥಸ್ವಾಮಿ ದೇವಾಸ್ಥಾನವೂ ಇದೆ.

**ಚಿತ್ರ- ಬರಹ: ನವೀನ್ ತಿಮ್ಮೋಜಿ, ದಾವಣಗೆರೆ**

